# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/10/2020-21 ದಿನಾಂಕ: 04.01.2021

**-:ದಿನಾಂಕ:04-12-2020 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ: 02.01.2021 ರ ಶನಿವಾರ ಅಪರಾಹ್ನ 2.30 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

ಸಭೆಗೆ ಹಾಜರಿದ್ದವರು:-

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ವಿನಯ್ | ಬಿಬಿಎಂಪಿ ಕಲ್ಯಾಣ ಇಲಾಖೆ | ಹಾಜರಿದ್ದರು. |
| 4. | ಶ್ರೀ.ಸಂಜಯ್ಯ | AE Electrical | ಹಾಜರಿದ್ದರು. |
| 5. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 6. | ಶ್ರೀ.ಪ್ರಸಾದ್ | ಆರ್.ಡಬ್ಲ್ಯೂ.ಎ. ಸಾದರಮಂಗಳ | ಹಾಜರಿದ್ದರು. |
| 7. | ಶ್ರೀ ಆನಂದ.ಆರ್ | ಬೆಳತ್ತೂರು ಶಕ್ತಿ ಕೇಂದ್ರ | ಹಾಜರಿದ್ದರು. |
| 8. | ಶ್ರೀ.ಸುರೇಶ್ ಬಾಬು | ಮಾರ್ಷಲ್ ಹೂಡಿ | ಹಾಜರಿದ್ದರು. |
| 9. | ಶ್ರೀ.ಸತೀಶ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 10. | ಶ್ರೀ.ಮಂಜುನಾಥ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 11. | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 12. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 13. | ಶ್ರೀ.ನಾಗರಾಜ | SWM Sup. | ಹಾಜರಿದ್ದರು. |
| 14. | ಶ್ರೀ.ಶೇಖರಪ್ಪ | SWM Sup. | ಹಾಜರಿದ್ದರು. |
| 15. | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |
| 16. | ಶ್ರೀ.ಸತೀಶ್ | JE ಕಾಡುಗುಡಿ | ಹಾಜರಿದ್ದರು. |
| 17. | ಶ್ರೀ.ಹರೀಶ್. | SWM Sup. | ಹಾಜರಿದ್ದರು. |
| 18. | ಶ್ರೀ.ಮಹಂತೇಶ್ | ಪಶುಪಾಲನೆ | ಹಾಜರಿದ್ದರು. |
| 19. | ಶ್ರೀ.ಮನೋಜ್ | ಬಿ.ಡಬ್ಲ್ಯೂ.ಎಸ್,ಎಸ್.ಬಿ | ಹಾಜರಿದ್ದರು. |
| 20. | ಶ್ರೀ.ಶಶಿಕುಮಾರ್ | ಬಿ.ಡಬ್ಲ್ಯೂ.ಎಸ್,ಎಸ್.ಬಿ | ಹಾಜರಿದ್ದರು. |
| 21. | ಶ್ರೀ.ಎನ್.ಆರ್.ಮುನಿಯಪ್ಪ | ಎ.ಇಇ. ಆರ್.ಐ.ಮಹದೇವಪುರ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ವಿದ್ಯುತ್:-**

- ಆರ್.ಡಬ್ಲ್ಯೂ.ಎ. ಆನಂದ ಶಕ್ತಿ ಕೇಂದ್ರ ರವರು 2ನೇ ಮುಖ್ಯ ರಸ್ತೆ (ಸುರಕ್ಷಾ ಅಪಾರ್ಟ್‌ಮೆಂಟ್) ಯಲ್ಲಿ ಹೊಸ ಬೀದಿ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ. ಹಾಗೂ ಕಂಬಗಳು ದುರಸ್ಥಿಯಲ್ಲಿದ್ದು ಅದನ್ನು ಸರಿಪಡಿಸುವಂತೆ ಕೋರಿರುತ್ತಾರೆ. ಅಧ್ಯಕ್ಷರು ಎಇ ಬೆಸ್ಕಾಂ ರವರಿಗೆ ಸರಿಪಡಿಸಲು ಸೂಚಿಸಲಾಗಿದೆ.
- ಬೆಳತ್ತೂರು ರಾಮಾಚಾರಿ ಕಾಂಪೌಂಡ್ ಸುತ್ತಮುತ್ತಲ ಪ್ರದೇಶಗಳಲ್ಲಿ Electrical POLL ಗಳು ಬಾಗಿರುವ ರೀತಿಯಲ್ಲಿರುತ್ತವೆ ಅದನ್ನು ಸರಿಪಡಿಸಲು ಬೆಸ್ಕಾಂ ಕಾಡುಗೋಡಿ ರವರಿಗೆ ತಿಳಿಸಲು ಕೋರಿದರು. ಅಧ್ಯಕ್ಷರು ಎಇ ಬೆಸ್ಕಾಂ ರವರಿಗೆ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಆರ್.ಡಬ್ಲ್ಯೂ.ಎ. ಪ್ರಸಾದ್ ಸಾದರಮಂಗಳ ರವರು ಸಾದರಮಂಗಳದಲ್ಲಿ ಬೀದಿ ದೀಪಗಳ ದುರಸ್ಥಿಯಲ್ಲಿದ್ದು ಅದನ್ನು ಸರಿಪಡಿಸಲು ಕೋರಿದರು.
- ಬೆಳತ್ತೂರು ಮುಖ್ಯ ರಸ್ತೆ ಸ್ಮಶಾನದಿಂದ ದೊಮ್ಮಸಂದ್ರ ಕ್ರಾಸ್ ವರೆಗೆ ಈಗಾಗಲೇ ಬೀದಿ ದೀಪಗಳು ಅಳವಡಿಸಲಾಗಿದ್ದು, ಆದರೆ ಕನೆಕ್ಷನ್ ನೀಡಿರುವುದಿಲ್ಲ ಎಂದು ಸಾರ್ವಜನಿಕರು ದೂರು ನೀಡಿರುತ್ತಾರೆ
- ಅಧ್ಯಕ್ಷರು ಹಾಜರಿದ್ದ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿರುವ ಸಂಜಯ್ (AE Electrical) ಬಿಬಿಎಂಪಿ ರವರಿಗೆ ಈ ಮೇಲೆ ತಿಳಿಸಿರುವ ದೂರುಗಳನ್ನು ತಕ್ಷಣ ಸರಿಪಡಿಸುವಂತೆ ಸೂಚಿಸಿರುತ್ತಾರೆ.
- ತಿರುಮಲ ಎಲೆಕ್ಟ್ರಿಕಲ್ ಬೆಂಗಳೂರು ದೀಪಗಳ ನಿರ್ವಹಣ ಕಂಟ್ರಾಕ್ಟರ್ ರವರಿಗೆ ಬೀದಿ ದೀಪಗಳ ದುರಸ್ಥಿ ಬಗ್ಗೆ ಕ್ರಮ ಕೈಗೊಳ್ಳಲು ಈಗಾಗಲೇ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ ಎಂದು ಸಂಜಯ್ (AE Electrical) ಬಿಬಿಎಂಪಿ ರವರು ಸಭೆಯಲ್ಲಿ ತಿಳಿಸಿದರು.

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಆರ್.ಡಬ್ಲ್ಯೂ.ಎ. ಆರೋಗ್ಯ ಸ್ವಾಮಿ ಭೈರತಿ ರವರು ಆಟೋಗಳಿಗೆ ಮೈಕ್ ಅಳವಡಿಸಿರುತ್ತಾರೆ ಆದರೆ ಆಟೋ ಅನೌನ್ಸ್‌ಮೆಂಟ್ ಆಗುತ್ತಿರುವುದಿಲ್ಲ, ಅದನ್ನು ಸರಿಪಡಿಸಲು ತಿಳಿಸಿರುತ್ತಾರೆ.
- ಆರೋಗ್ಯ ನಿರೀಕ್ಷಕರು ಇದನ್ನು ಆಟೋ ಅನೌನ್ಸ್‌ಮೆಂಟ್ ಮಾಡಲು ನಾಳೆಯಿಂದಲೇ ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ನಾಗರತ್ನ ಎಸ್.ಡಬ್ಲ್ಯೂ.ಎಂ ಡ್ರೈವೆಸ್ಟ್ ಕಂಟ್ರಾಕ್ಟರ್ ರವರು ಡ್ರೈವೆಸ್ಟ್ ಸೆಂಟರ್ ಕಟ್ಟಲು ಸರ್ಕಾರಿ ಜಾಗವನ್ನು ನೀಡಲು ಸಭೆಯಲ್ಲಿ ಕೋರಿಕೊಂಡಿರುತ್ತಾರೆ.
- ಅಯ್ಯಪ್ಪನಗರ ಆರ್.ಡಬ್ಲ್ಯೂ.ಎ. ಗಳಾದ ಸತೀಶ್ ಹಾಗೂ ಮಂಜುನಾಥ ರವರು ಒಣಕಸ ಮತ್ತು ಹಸಿಕಸ ನಿರ್ವಹಣೆ ಪ್ರತಿ ದಿನ ಸರಿಯಾಗಿ ಮಾಡುತ್ತಿದ್ದಾರೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.
- ಬೆಳತ್ತೂರು ಮುಖ್ಯ ರಸ್ತೆಯಲ್ಲಿ ಬ್ಲಾಕ್ ಸ್ಪಾಟ್‌ಗಳು ಕಂಡು ಬಂದಿದ್ದು ವಾರ್ಡ್ ವ್ಯಾಪ್ತಿಯಲ್ಲಿನ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ಸ್ವಚ್ಛಗೊಳಿಸಲು ಆರೋಗ್ಯ ನಿರೀಕ್ಷಕರಿಗೆ ಸೂಚಿಸಿರುತ್ತಾರ.
- ಬ್ಲಾಕ್‌ಸ್ಪಾಟ್ ಸುಂದರೀಕರಣ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು, ಸೀನಿಯರ್ ಹೆಲ್ತ್ ಇನ್ಸೆಪ್ಟರ್, ಜೂನಿಯರ್ ಹೆಲ್ತ್ ಇನ್ಸೆಪ್ಟರ್, ಹಾಗೂ ಆರ್.ಡಬ್ಲ್ಯೂ.ಎ. ಸಮ್ಮುಖದಲ್ಲಿ ಪ್ರತಿ ವಾರಕ್ಕೊಮ್ಮೆ ಒಂದು ಬ್ಲಾಕ್ ಸ್ಪಾಟ್ ಬ್ಯೂಟಿಫಿಕೇಶನ್ ಮಾಡಲು ಸೂಚಿಸಿರುತ್ತಾರೆ.

**ಲಾ ಅಂಡ್ ಆರ್ಡ್**

- ನೋಡಲ್ ಅಧಿಕಾರಿಗಳು ವಾರ್ಡ್ ಮಾರ್ಷಲ್ ರವರಿಗೆ ಡೆಬ್ರೀಸ್ ಕಸ ಸುರಿಯುವರಿಗೆ ಕಾದು ರಾತ್ರಿಪಾಳಿ ಕಾರ್ಯನಿರ್ವಹಿಸುತ್ತಿರುವವರಿಗೆ ದಂಡ ಹಾಕಬೇಕೆಂದು ತಿಳಿಸುತ್ತಾರೆ.
- ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಮಾರ್ಷಲ್ ರವರು ಸೂಪರ್‌ವೈಸರ್ ಮೇಸ್ತ್ರಿಗಳೊಂದಿಗೆ ಹಾಗೂ ಪೋಲಿಸ್ ಅಧಿಕಾರಿಗಳ ಜೊತೆಗುಡಿ ಕಸಹಾಕುವವರಿಗೆ ದಂಡ ವಿಧಿಸಿ ಶುಚಿಗೊಳಿಸಲು ಸೂಚಿಸಿರುತ್ತಾರೆ.
- ಹೂಡಿ ವ್ಯಾಪ್ತಿಯ ನಿರಾಶಿತ್ರರ ಕೇಂದ್ರದ ರಾತ್ರಿ ಸಮಯದಲ್ಲಿ ಕೆಲ ಕೀಡಿ ಗೇಡಿಗಳು ಬಂದು ಗಲಾಟೆ ಮಾಡಿ ತೊಂದರೆ ಕೊಡುತ್ತಿದ್ದಾರೆಂದು ಸಭೆಯಲ್ಲಿ ಶ್ರೀ ವಿನಯ್ ಬಿಬಿಎಂಪಿ ಕಲ್ಯಾಣ ಇಲಾಖೆಯವರು ತಿಳಿಸಿದರು ಹಾಗೂ ಅಧ್ಯಕ್ಷರು ಮಹದೇವಪುರ ಪೋಲಿಸ್ ಠಾಣೆ ರವರಿಗೆ ರಾತ್ರಿ ಸಮಯದಲ್ಲಿ ನೈಟ್ ಬೀಟ್ ಮಾಡಲು ಪತ್ರ ಬರೆಯಲು ಕಾರ್ಯದರ್ಶಿಯವರಿಗೆ ತಿಳಿಸಿದರು.
- ರಾಜೇಶ್ ಆಲ್‌ಗಾರ್ಡನ್ ರವರು ಆಲ್‌ಗಾರ್ಡನ್‌ನಲ್ಲಿ ಬಿಲ್ಡಿಂಗ್ ಕಾಮಗಾರಿ ನಡೆಯುತ್ತಿದ್ದು ಕೂಲಿ ಕಾರ್ಮಿಕರು ರಾತ್ರಿ ಸಮಯದಲ್ಲಿ ಕುಡಿದು ಗಲಾಟೆ ಮಾಡುತ್ತಾರೆಂದು ಸಭೆಯಲ್ಲಿ ತಿಳಿಸಿರುತ್ತಾರೆ ಮತ್ತು ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಹಾಗೂ ಅಧ್ಯಕ್ಷರು ಕೆ.ಆರ್.ಪುರಂ ಪೋಲಿಸ್ ಠಾಣೆ ರವರಿಗೆ ರಾತ್ರಿ ಸಮಯದಲ್ಲಿ ನೈಟ್ ಬೀಟ್ ಮಾಡಲು ಪತ್ರ ಬರೆಯಲು ಕಾರ್ಯದರ್ಶಿಯವರಿಗೆ ತಿಳಿಸಿದರು.
- ಆರೋಗ್ಯ ಸ್ವಾಮಿ ಭೈರತಿ ರವರು ಭೈರತಿ, ಗೆದ್ದಲಹಳ್ಳಿ ರಸ್ತೆಯಲ್ಲಿ ರಾತ್ರಿ ಸಮಯದಲ್ಲಿ ಕಳ್ಳರ ಕಾಟ ಹೆಚ್ಚಾಗಿರುವುದರಿಂದ ರಾತ್ರಿ ಸಮಯದಲ್ಲಿ ಪೋಲಿಸ್ ನೈಟ್ ಬೀಟ್ ಮಾಡಲು ಕೋರಿದರು. ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಪೋಲಿಸ್ ಅಧಿಕಾರಿಗಳಿಗೆ ನೈಟ್ ಬೀಟ್ ಮಾಡಲು ಸೂಚಿಸಿದರು.

**ಕಾಮಗಾರಿ ಇಲಾಖೆ:-**

- ಆರೋಗ್ಯಸ್ವಾಮಿಯವರು ಚಿಕ್ಕ ಭೈರತಿಯಲ್ಲಿ 6ನೇ ಕ್ರಾಸ್ ಬ್ಲೇಸಿಂಗ್ ಗಾರ್ಡನ್‌ನಲ್ಲಿ ಹೊಸದಾಗಿ ರೋಡ್ ಹಾಗೂ ಚರಂಡಿ ಮಾಡಿಕೊಡಲು ಕೋರಿದರು. ಅಧ್ಯಕ್ಷರು ವಾರ್ಡ್ ಎಇ ರವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಆರೋಗ್ಯಸ್ವಾಮಿಯವರು ಭೈರತಿ ಗೆದ್ದಲಹಳ್ಳಿ ರಸ್ತೆ ಹೊಸದಾಗಿ ರೋಡ್ ಹಾಗೂ ಚರಂಡಿ ತುರ್ತಾ ಮಾಡಿಕೊಡಲು ಕೋರಿದರು. ಅಧ್ಯಕ್ಷರು ವಾರ್ಡ್ ಎಇಇ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಆನಂದ ಆರ್.ಡಬ್ಲ್ಯೂ.ಎ. ರವರು ಮೇಜರ್ ರೋಡ್ ಹಾಗೂ ವಾರ್ಡ್ ರಸ್ತೆಗೆ ಸಂಬಂಧಿಸಿದಂತೆ ಕೆಲವು ರಸ್ತೆಗಳಲ್ಲಿ ಕಾಮಗಾರಿ ಕೆಲಸಗಳು ಮಾಡುತ್ತಿದ್ದು ಹಳ್ಳ ದಿನ್ನೆಗಳು ಇರುತ್ತವೆ ಹಾಗೂ ಗುಂಡಿಗಳು ಬಿದ್ದಿರುತ್ತವೆ ಎಂದು ತಿಳಿಸಿದರು.

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

- ಆರ್.ಡಬ್ಲ್ಯೂ.ಎ. ಮಂಜುನಾಥ್ ಹಾಗೂ ಸತೀಶ್ ರವರು ಅಯ್ಯಪ್ಪನಗರದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ನೀರಿನ ಸಮಸ್ಯೆ ಇದೆ ಎಂದು ತಿಳಿಸಿರುತ್ತಾರೆ. ಅದರಂತೆ ಅಧ್ಯಕ್ಷರು. ಎಇ ನವೀನ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ರವರಿಗೆ ಇದಕ್ಕೆ ಸಂಬಂಧಿಸಿದಂತೆ ಕೂಡಲೆ ನೀರನ್ನು ಬಿಡಲು ಸೂಚಿಸಿರುತ್ತಾರೆ.

- ಸೂರ್ಯ ಲೇಔಟ್ ಹಾಗೂ ಟವರ್ ರೋಡ್ 2ನೇ ಬ್ಲಾಕ್ ಅಯ್ಯಪ್ಪನಗರ ರಸ್ತೆಯಲ್ಲಿ ವಾಟರ್ ಲೀಕೆಜ್ ಆಗುತ್ತಿರುವುದೇಂದು ಆರ್.ಡಬ್ಲ್ಯೂ.ಎ. ಮಂಜುನಾಥ್ ರವರು ತಿಳಿಸಿದರು ಹಾಗೂ 6ನೇ ಮುಖ್ಯ ರಸ್ತೆ, 3ನೇ ಬ್ಲಾಕ್ ಹಾಗೂ 3ನೇ ಮುಖ್ಯ ರಸ್ತೆ 2ನೇ ಬ್ಲಾಕ್ ಅಯ್ಯಪ್ಪನಗರ ಯುಜಿಡಿ ಬ್ಲಾಕ್ ಆಗಿದೆ ಎಂದು ತಿಳಿಸಿದರು ಅಧ್ಯಕ್ಷರು ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ 2 ದಿನಗಳೊಂದಿಗೆ ಸಮಸ್ಯೆ ಸರಿಪಡಿಸಲು ತಿಳಿಸಿದರು.
- 110 ಹಳ್ಳಿಗಳಿಗೆ ಸಂಬಂಧಿಸಿದಂತೆ ಭೈರತಿ, ವಾರಣಾಶಿ, ಬೀಳಿಶಿವಾಲೆ, ಬೆಳತ್ತೂರು ಹಾಗೂ ಕುಂಬೇನಾ ಅಗ್ರಹಾರ ಹಳ್ಳಿಗಳಲ್ಲಿ ಈಗಾಗಲೇ ಕುಡಿಯುವ ನೀರು ಹಾಗೂ ಯುಜಿಡಿ ಕೆಲಸ ನೆಡೆಯುತ್ತಿದ್ದು ಆದರೆ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯಿಂದ ಕೆಲಸ ಪೂರ್ಣಗೊಂಡ ನಂತರ ಸರಿಯಾಗಿ ಮಣ್ಣು ಮುಚ್ಚದೆ ಗುಂಡಿ ಬಿದ್ದಿದ್ದು ರಸ್ತೆಯಲ್ಲಿ ಓಡಾಡಲು ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಆರ್.ಡಬ್ಲ್ಯೂ.ಎ., ಎಇಇ ಮೇಜರ್ ರೋಡ್ ಹಾಗೂ ವಾರ್ಡ್ ಇಂಜಿನೀಯರ್ ರವರು ಸಭೆಯಲ್ಲಿ ತಿಳಿಸಿದರು. ಅಧ್ಯಕ್ಷರು ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

**ಇತರೆ ವಿಷಯಗಳು**

- ಬೆಳತ್ತೂರು, ಕೊಡಿಗೇಹಳ್ಳಿ, ಸಾದರಮಂಗಲ, ಅಯ್ಯಪ್ಪನಗರ ಈ ಪ್ರದೇಶಗಳಲ್ಲಿ ಹಂದಿಗಳ ಕಾಟ ಹೆಚ್ಚಾಗಿದ್ದು ಇದನ್ನು ಹಿಡಿದು ಮತ್ತೆ ಬರದಂತೆ ನೋಡಿಕೊಳ್ಳಬೇಕೆಂದು ಆರ್.ಡಬ್ಲ್ಯೂ.ಎ. ರವರು ಕೋರಿರುತ್ತಾರೆ.
- ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಮಹಂತೇಶ್‌ಗೌಢ (ಪಶುಪಾಲನೆ) ರವರಿಗೆ ಇದರ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ. ಅದರಂತೆ ಮಹಂತೇಶ್‌ಗೌಢ (ಪಶುಪಾಲನೆ) ರವರು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಸ್ವಲ್ಪ ಹಂದಿಗಳನ್ನು ಹಿಡಿಯಲು ತಡವಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.
- ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಮಹಂತೇಶ್‌ಗೌಢ (ಪಶುಪಾಲನೆ) ರವರಿಗೆ ವಾರಕ್ಕೊಂದು ಏರಿಯವನ್ನು ಗುರುತಿಸಿ ಹಂದಿಗಳನ್ನು ಹಿಡಿಯಲು ಹಾಗೂ ಮತ್ತೆ ಬರದಂತೆ ಹಾಗೂ ಹಂದಿ ಮಾಲಿಕರಿಗೆ ನೋಟಿಸ್ ಕೊಡಲು ಸೂಚಿಸಿರುತ್ತಾರೆ.
- ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಶ್ರೀ ವಿನಯ್ (ಬಿಬಿಎಂಪಿ ಕಲ್ಯಾಣ ಇಲಾಖೆ) ರವರು ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ತಿಳಿಸಿದರು ಹಾಗೂ ಸದುಪಯೋಗ ಪಡಿಸಿಕೊಳ್ಳಲು ಕೋರಿದರು.
- ಸುರೇಶ್ ಆಲ್ಫಗಾರ್ಡನ್ ರವರು ಆಲ್ಫಗಾರ್ಡನ್ ರೆಸಿಡೆನ್ಸಿಯಲ್ ಪ್ರದೇಶವಾಗಿದ್ದು ಅದರಲ್ಲಿ ಅಗಂಡಿಗಳನ್ನು ಪರವಾನಗಿ ಇಲ್ಲದೆ ನಡೆಸುತ್ತಿದ್ದಾರೆ ಎಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಆಲ್ಫಗಾರ್ಡನ್ ರೆಸಿಡೆನ್ಸಿಯಲ್ ಪ್ರದೇಶವಾಗಿದರಿಂದ ಯಾವುದೇ ತರಹದ ಅಂಗಡಿಗಳನ್ನು ಪರವಾನಗಿ ನೀಡಬಾರದು ಮತ್ತು ಅವುಗಳನ್ನು ತೆರವುಗೊಳಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿರುತ್ತಾರೆ.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

- Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು.

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ